# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :— ದಿನಾಂಕ 31—5—95 ರವರೆವಿಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅನುಸರಿಸಬೇಕಾದ ಮೀಸಲಾತಿ ನಿಯಮಾವಳಿಗಳು — ಈ ಸೌಲಭ್ಯವನ್ನು ಪಡೆಯುವಲ್ಲಿ ಸಲ್ಲಿಸಬೇಕಾಗಿರುವ ಘೋಷಣಾ ಪತ್ರ/ಪರಿಶೀಲನಾ ಪ್ರಮಾಣಪತ್ರಗಳ— ನಿಗದಿತ ನಮೂನೆ ಕುರಿತು— ಆದೇಶ

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ ಸಕಇ 251 ಬಿಸಿಎ 94ರ ದಿನಾಂಕ : 31—1—95

ಪ್ರಸ್ತಾವನೆ :

ಭಾರತ ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ತೀರ್ಪಿನ ಮೇರೆಗೆ ದಿನಾಂಕ 31—5—95 ರವರೆವಿಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅನುಸರಿಸಬೇಕಾದ ಮೀಸಲಾತಿ ನಿಯಮಾವಳಿಗಳ ಕುರಿತಂತೆ, ಸರ್ಕಾರದ ಆದೇಶಗಳನ್ನು ಮೇಲೆ ಓದಲಾಗಿರುವ ಸರ್ಕಾರದ ಆದೇಶದಲ್ಲಿ ಹೊರಡಿಸಲಾಗಿದ್ದು, ಇದಕ್ಕಾಗಿ ಅಭ್ಯರ್ಥಿಗಳು ಸಲ್ಲಿಸಬೇಕಾದ ಘೋಷಣಾ ಪತ್ರ ಹಾಗೂ ಪರಿಶೀಲನಾ ಪ್ರಮಾಣ ಪತ್ರಗಳ ನಮೂನೆಯನ್ನು ಹೊರಡಿಸಲು ನಿರ್ಧರಿಸಿ, ಸರ್ಕಾರ ಈ ಆದೇಶಗಳನ್ನು ಹೊರಡಿಸುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ ಸಕಇ 40 ಬಿಸಿಎ 95, ಬೆಂಗಳೂರು ದಿನಾಂಕ 8ನೇ ಫೆಬ್ರವರಿ 1995

ಸರ್ಕಾರದ ಮೀಸಲಾತಿ ಆದೇಶದ ಸಂಖ್ಯೆ ಸಕಇ 251 ಬಿಸಿಎ 94ರ ದಿನಾಂಕ : 31—1—1995ರ ಮೇರೆಗೆ ದಿನಾಂಕ 31—5—95 ರವರೆವಿಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅಭ್ಯರ್ಥಿಗಳು ಸಲ್ಲಿಸಬೇಕಾದ ಘೋಷಣಾ ಹಾಗೂ ಪರಿಶೀಲನಾ ಪ್ರಮಾಣ ಪತ್ರಗಳನ್ನು ಅನುಬಂಧದಲ್ಲಿರುವ ನಮೂನೆಯಲ್ಲಿ ಸಲ್ಲಿಸುವಂತೆ ಆದೇಶವನ್ನು ಹೊರಡಿಸುವಲ್ಲಿ ಸರ್ಕಾರವು ಹರ್ಷಿಸುತ್ತದೆ.

ದಿನಾಂಕ 31—5—1995 ರವರೆವಿಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅಭ್ಯರ್ಥಿಗಳು ಜಾತಿ ಘೋಷಣಾ ಹಾಗೂ ಪರಿಶೀಲನಾ ಪ್ರಮಾಣ ಪತ್ರಗಳನ್ನು ನೀಡುವಲ್ಲಿ ಸಂಬಂಧಿತ ಅಧಿಕಾರಿಗಳು ಸದರಿ ಅಭ್ಯರ್ಥಿಗಳ ಜಾತಿ ಮತ್ತು ಉಪ ಜಾತಿಗಳ ವರ್ಗೀಕರಣವನ್ನು ಸರ್ಕಾರದ ಆದೇಶ ಸಂಖ್ಯೆ ಸಕಇ 251 ಬಿಸಿಎ 94ರ ದಿನಾಂಕ 31—1—95 ರಲ್ಲಿ ಬರುವಂತೆ ಅನುಸರಿಸುವುದು ಪರಿಶೀಲನಾ ಪ್ರಮಾಣ ಪತ್ರವನ್ನು ನೀಡಲು ತಹಶೀಲ್ದಾರ್ ಹಾಗೂ ಮೇಲ್ಪಟ್ಟ ಕಂದಾಯ ಅಧಿಕಾರಿಗಳಿಗೆ ಮಾತ್ರ ಅಧಿಕಾರ ನೀಡಲಾಗಿದೆ.

ಸದರಿ ಸೌಲಭ್ಯವನ್ನು ಪಡೆಯುವಲ್ಲಿ ವರ್ಗ 1ನ್ನು ಹೊರತುಪಡಿಸಿದಂತೆ ಯಾವ ಅಭ್ಯರ್ಥಿ/ಅಭ್ಯರ್ಥಿಯ ತಂದೆ/ತಾಯಿ/ಪೋಷಕರು, ಗಂಡ ಅಥವಾ ಹೆಂಡತಿ ಈ ಕೆಳಕಂಡ ಉದ್ಯೋಗ ಅಥವಾ ಸ್ಥಿರಾಸ್ತಿಯನ್ನು ಹೊಂದಿದ್ದಲ್ಲಿ ಅರ್ಹರಾಗಿರುವುದಿಲ್ಲ.

ಅ) 2ನೇ ದರ್ಜೆ ಪತ್ರಾಂಕಿತ ಸರ್ಕಾರಿ ಅಧಿಕಾರಿಗಳಾಗಿದ್ದಲ್ಲಿ (ವೇತನ ಶ್ರೇಣಿ 2050—3950) ಅಥವಾ ತತ್ಸಮಾನ ವೇತನ ಶ್ರೇಣಿಯ ಸರ್ಕಾರಿ ಸ್ವಾಮ್ಯದ ಅಥವಾ ನಿಗಮಗಳ/ಸಂಸ್ಥೆಗಳ ಹುದ್ದೆಗಳಲ್ಲಿದ್ದಲ್ಲಿ

ಆ) ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ

ಇ) ಮಾರಾಟ ತೆರಿಗೆ ಪಾವತಿದಾರರಾಗಿದ್ದಲ್ಲಿ

ಈ) ಸಂಪತ್ತು ತೆರಿಗೆ ಪಾವತಿದಾರರಾಗಿದ್ದಲ್ಲಿ

ಉ) 8 ಹೆಕ್ಟೇರ್ ಮಳೆಯಾಧಾರಿತ ಅಥವಾ ಒಣಭೂಮಿ ಅಥವಾ ಅದರ ಸಮಾನಾಂತರ ತರೀ/ಬಾಗಾಯ್ತು (ಭೂ ಸುಧಾರಣಾ ಕಾಯ್ದೆ ಮೇರೆಗೆ) ಜಮೀನನ್ನು ಹೊಂದಿದ್ದಲ್ಲಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಹೆಚ್. ದೇವರಾಜ್,
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.